# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆಸಂಖ್ಯೆ | : | 1357 |
| ಸದಸ್ಯರ ಹೆಸರು | : | ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ) |
| ಉತ್ತರಿಸುವ ಸಚಿವರು | : | ಕಂದಾಯ ಸಚಿವರು |
| ಉತ್ತರಿಸುವ ದಿನಾಂಕ | : | 18.03.2020 |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ವಿಧಾನಸಭೆ ಮತ್ತು ವಿಧಾನ ಪರಿಷತ್ ಸದಸ್ಯರುಗಳಿಗೆ ಆಪ್ತ ಸಹಾಯಕರಾಗಿ ನೇಮಕವಾಗಿ ನಿಯೋಜನೆ ಮೇರೆಗೆ ಬೆಂಗಳೂರು ಉತ್ತರ ತಾಲ್ಲೂಕು ಕಛೇರಿಯಲ್ಲಿ ವೇತನ ಪಡೆಯುತ್ತಿರುವ ವಿವಿಧ ಇಲಾಖೆಗಳ ನೌಕರರಿಗೆ ಕಳೆದ ನವಂಬರ್ ತಿಂಗಳಿಂದ ವೇತನ ಬಿಡುಗಡೆ ಮಾಡದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ವಿವರ ನೀಡುವುದು) | ಸರ್ಕಾರದ ಗಮನಕ್ಕೆ ಬಂದಿದೆ.<br>ಖಜಾನೆ-2 ತಂತ್ರಾಂಶವು ನವೆಂಬರ್ 19 ರಿಂದ ರಾಜ್ಯದಲ್ಲಿ ಜಾರಿಗೆ ಬಂದಿದ್ದು, ವಿಧಾನ ಮಂಡಲದ ಕಾರ್ಯಾಲಯಕ್ಕೆ ಮ್ಯಾಪಿಂಗ್ ಮಾಡಲಾಗಿದ್ದ, ವಿಧಾನ ಸಭಾ ಸದಸ್ಯರುಗಳ ಆಪ್ತ ಸಹಾಯಕರುಗಳಿಗೆ ವೇತನ ಸಂಬಂಧಿಸಿದ ಲೆಕ್ಕ ಶೀರ್ಷಿಕೆಗಳನ್ನು ಕಂದಾಯ ಇಲಾಖೆಗೆ ಮ್ಯಾಪಿಂಗ್ ಮಾಡಿಕೊಳ್ಳುವ ತಾಂತ್ರಿಕ ಕಾರಣಗಳಿಂದ ಸದರಿಯವರ ವೇತನ ಪಾವತಿಯಲ್ಲಿ ತೊಂದರೆಯಾಗಿರುತ್ತದೆ. |
| ಆ) | ಸದರಿ ಆಪ್ತ ಸಹಾಯಕರುಗಳಿಗೆ ಕಳೆದ 2 ವರ್ಷಗಳಿಂದ ಡಿಎ, ಬಾಕಿ ವೇತನ ಹಾಗೂ ವೈದ್ಯಕೀಯ ವೆಚ್ಚ ಮರುಪಾವತಿ ಹಣವನ್ನು ಬಿಡುಗಡೆ ಮಾಡದೆ ಇರಲು ಕಾರಣಗಳೇನು; | 2018 ಮತ್ತು 2019ನೇ ಸಾಲಿನ ಡಿಎ ವೇತನ ತಯಾರಿಸಲು ಎಲ್ಲಾ ನೌಕರರ Recepient id create ಮಾಡಲು ಖಜಾನೆ-2 ತಂತ್ರಾಂಶದಲ್ಲಿ ತಾಂತ್ರಿಕ ತೊಂದರೆ ಉಂಟಾದ ಕಾರಣ ಡಿಎ ಬಾಕಿ ಪಾವತಿಸಲು ವಿಳಂಬವಾಗಿರುತ್ತದೆ. |
| ಇ) | ಸದರಿಯವರಿಗೆ ವೇತನ ಮತ್ತು ಇತರೆ ಭತ್ಯೆಗಳನ್ನು ಯಾವ ಕಾಲಮಿತಿಯಲ್ಲಿ ನೀಡಲಾಗುವುದು? | ಸದರಿಯವರಿಗೆ ವೇತನ ಮತ್ತು ಇತರೆ ಭತ್ಯೆಗಳಾದ ಡಿಎ,ಬಾಕಿ ವೇತನ ಹಾಗೂ ವೈದ್ಯಕೀಯ ವೆಚ್ಚ ಮರುಪಾವತಿಯನ್ನು ಶೀಘ್ರದಲ್ಲಿ ಪಾವತಿಸಲು ಕ್ರಮ ವಹಿಸ ಲಾಗುತ್ತಿದೆ. |

**ಕಂಇ 34 ಡಬ್ಲ್ಯೂಬಿಆರ್ 2020**

(ಆರ್. ಅಶೋಕ)
ಕಂದಾಯ ಸಚಿವರು